Regulated Markets (Income and Expenditure)

Q.—89. Sri B. CHICKANNA (Javagal).—

Will the Government be pleased to state :—

(*a*) the number of Regulated Markets in Mysore State ;

(*b*) the income and expenditure of each market for years 1954 and 1955 ?

A.—Dr. R. NAGAN GOWDA (Minister for Agriculture).—

(*a*) Ten.

(*b*) *Vide* statement appended below.

Statement showing the Income and Expenditure of the Regulated Market Committee in the State for 1954 and 1955.

	Name of the Market	Year	Income	Expenditure
			Rs. a. p.	Rs. a. p.
1	Regulated Market, Chitaldrug ...	1954	1,00,238 9 0	72,068 8 5
		1955	46,540 14 4	43,216 8 7
2	Regulated Market, Davangere ...	1954	48,223 13 4	45,727 13 9
		1955	63 717 4 7	47,103 13 9
3	Regulated Market, Chintamani...	1954	Market was not functioning.	
		1955	10,415 3 9	4,483 13 6
4	Regulated Market, Bellary ...	1954	1,67,418 10 3	1,10,447 4 3
		1955	93,109 14 9	81,368 15 8
5	Regulated Market, Shimoga ...	1954	22,831 7 3	13,895 3 3
		1955	23,747 4 0	14,731 12 3
6	Regulated Market, Arsikere ...	1954	21,772 5 3	11,070 9 3
		1955	99,817 3 3	12,597 5 9
7	Regulated Market, Saklespur ...	1954	16,229 0 0	4,660 8 0
		1955	29,756 6 0	18,180 14 6
8	Regulated Market, Tumkur ...	1954	23,259 9 6	12,715 5 6
		1955	27,655 13 9	11,496 4 0
9	Regulated Market, Mysore ...	1954	65,039 13 0	96,283 4 1
		1955	73,010 2 3	73,007 1 6
10	Regulated Market, Tiptur ...	1954	40,800 10 6	33,411 7 6
		1955	20,884 10 6	16,499 14 6

ಶ್ರೀ ಬಿ. ಚಿಕ್ಕಣ್ಣ.—ನೀವು ಕೊಟ್ಟಿರುವ ಪರಿಶಿಷ್ಟದ ಪ್ರಕಾರ ಮಾರ್ಕೆಟ್ಟುಗಳ ಆದಾಯ ಚೆನ್ನಾಗಿದೆಯಲ್ಲವೇ ?

*ಡಾ॥ ಆರ್. ನಾಗನಗೌಡ.—ಇದರೊಳಗೆ ಸರ್ಕಾರಕ್ಕೆ ಆದಾಯವೆನ್ನುವ ಪ್ರಶ್ನೆಯೇ ಬರುವುದಿಲ್ಲ. ಮಾರ್ಕೆಟ್ಟಿನವರು ರೆಜಿಸೆನ್ಸ್ ಫೀ ವಸೂಲ್ಮಾಡಿ ಮಾರ್ಕೆಟ್ ನಡೆಸುತ್ತಿದ್ದಾರೆ. ಇದರಲ್ಲಿ ಆದಾಯವೇನೂ ಇಲ್ಲ. ರೈತರಿಗೆ ಆಯಾ ಮಾರ್ಕೆಟ್ಟುಗಳಲ್ಲಿ ನರಿಯಾದ ವ್ಯಾಪಾರ, ನರಿಯಾದ ತೂಕ ಮುಂತಾದುವು ದೊರೆಯುವುದೇ ಆದಾಯವೆಂದು ಭಾವಿಸಬೇಕು.

ಶ್ರೀ ಬಿ. ಚಿಕ್ಕಣ್ಣ.—ನೀವು ಕೊಟ್ಟಿರುವ ಅಂಕ ಅಂಶಗಳ ಪ್ರಕಾರ, ಹುಟ್ಟುವಳಿಯೊಳಗೆ ಖರ್ಚು ಕಳೆದ ಮೇಲೆ ಉಳಿದ ಆ ಉತ್ಪತ್ತಿಯು ಸರ್ಕಾರಕ್ಕೆ ಬರುವುದಿಲ್ಲವೇ ?

ಡಾ॥ ಆರ್. ನಾಗನಗೌಡ.—ಇದರೊಳಗೆ ಸರ್ಕಾರಕ್ಕೆ ಏನು ಲಾಭವಿದೆಯೋ ನನಗೇ ಗೊತ್ತಿಲ್ಲ. ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಬಂದದ್ದು ಅವರಿಗೇ ಹೊರತು ಸರ್ಕಾರಕ್ಕೆ ಅದರಿಂದ ಲಾಭವಿಲ್ಲ.

ಶ್ರೀ ಬಿ. ಚಿಕ್ಕಣ್ಣ.—ಈ ಹಣ ಮಾರ್ಕೆಟ್‌ನಲ್ಲಯೇ ಇರುತ್ತದೆಯಲ್ಲವೇ ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಬಿ. ಚಿಕ್ಕಣ್ಣ.—ಈ ವರ್ಷ ಎಷ್ಟು ಮಾರ್ಕೆಟ್ಟುಗಳನ್ನು ಹೊಸದಾಗಿ ತೆರೆಯಬೇಕೆಂದು ಆಲೋಚನೆ ಮಾಡಿದ್ದೀರಿ ?

ಡಾ॥ ಆರ್. ನಾಗನಗೌಡ.—ತಮಗೆ ತಿಳಿದ ಹಾಗೆ ಈಗಾಗಲೇ ನಾಲ್ಕೈದು ಮಾರ್ಕೆಟ್ಟುಗಳನ್ನು ಹೊಸದಾಗಿ 1955-56 ರಲ್ಲಿ ತೆರೆದಿದ್ದೇವೆ ಮತ್ತು ಎಲ್ಲೆಲ್ಲ ಈ ರೀತಿ ಮಾರ್ಕೆಟ್ಟುಗಳು ಬೇಕಾಗುತ್ತವೆಯೋ ಅಲ್ಲೆಲ್ಲ ತೆರೆಯಬೇಕೆಂದು ನಾವು ಯೋಚನೆ ಮಾಡಿದ್ದೇವೆ.

ಶ್ರೀ ಬಿ. ಚಿಕ್ಕಣ್ಣ.—ಹಾಸನ ಮುನಿಸಿಪಾಲಟಿಯವರೂ ಮತ್ತು ಜಿಲ್ಲಾ ಬೋರ್ಡಿನವರೂ ಹಾಸನದಲ್ಲಿ Regulated Market Act ಜಾರಿಗೆ ತರಬೇಕೆಂದು ಕೇಳಿಲ್ಲವೆ ?

ಡಾ॥ ಆರ್. ನಾಗನಗೌಡ.—ಕೇಳಿದ್ದಾರೆ.

ಶ್ರೀ ಬಿ. ಚಿಕ್ಕಣ್ಣ.—ಹಾಗಾದರೆ ಯಾಕೆ ನಿಧಾನ ಮಾಡುತ್ತಿದ್ದೀರಿ ?

ಡಾ॥ ಆರ್. ನಾಗನಗೌಡ.—ನಿಧಾನ ಮಾಡುತ್ತಿಲ್ಲ. ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಬಿ. ಚಿಕ್ಕಣ್ಣ.—ರೆಗ್ಯುಲೇಟೆಡ್ ಮಾರ್ಕೆಟ್ ಆಕ್ಟನ್ನು ದೇಶಾದ್ಯಂತ ಜಾರಿಗೆ ಕೊಡಬೇಕೆಂದು ಎಲ್ಲಾ ಕಡೆಗಳಿಂದಲೂ ಕೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ?

ಡಾ॥ ಆರ್. ನಾಗನಗೌಡ.—ಕೆಲವು ಕಡೆಗಳಿಂದ ಕೇಳುತ್ತಿದ್ದಾರೆ. ಎಲ್ಲ ಕಡೆಗಳಲ್ಲೂ ಕೇಳುತ್ತಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಎಲ್ಲೆಲ್ಲಿ ಕೇಳುತ್ತಿದ್ದಾರೆಯೋ ಅಲ್ಲೆಲ್ಲ ರೆಗ್ಯುಲೇಟೆಡ್ ಮಾರ್ಕೆಟ್ಟುಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ.

ಶ್ರೀ ಬಿ. ಚಿಕ್ಕಣ್ಣ.—ಆದಷ್ಟು ಜಾಗ್ರತೆ ಎಲ್ಲ ಕಡೆಗಳಲ್ಲಿಯೂ ಜಾರಿಗೆ ತರುತ್ತೀರಾ ?

ಡಾ॥ ಆರ್. ನಾಗನಗೌಡ.—ಅಗತ್ಯವಾಗಿ ಮಾಡುತ್ತೇವೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ರೆಗ್ಯುಲೇಟೆಡ್ ಮಾರ್ಕೆಟ್ ಸ್ಥಾಪನೆಯಾಗುವ ಸಂದರ್ಭದಲ್ಲಿ ಸರ್ಕಾರದವರು ಪ್ರಾರಂಭದಲ್ಲಿ ಸಹಾಯ ದ್ರವ್ಯವನ್ನು ಕೊಡುತ್ತಾರಲ್ಲವೆ ?

ಡಾ॥ ಆರ್. ನಾಗನಗೌಡ.—ಕೊಡುತ್ತಾರೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಆಯವ್ಯಯ ಪಟ್ಟಿಯಲ್ಲಿ ಆದಾಯವೆಂದು ತೋರಿಸಿರುವುದರಲ್ಲಿ ಸರ್ಕಾರದವರು ಕೊಟ್ಟಿರುವ ಸಬ್ಸಿಡಿಯೂ ಸೇರಿದೆಯೇ ಅಥವ ಅವರಿಗೆ ಪ್ರತ್ಯೇಕವಾಗಿ ಬಂದ ಉತ್ಪತ್ತಿ ಮಾತ್ರ ಸೇರಿದೆಯೇ ?

ಡಾ॥ ಆರ್. ನಾಗನಗೌಡ.—ಇದರೊಳಗೆ ಸರ್ಕಾರದವರು ಕೊಟ್ಟ ಸಬ್ಸಿಡಿ, ಲೋನ್ಸ್ ಎಲ್ಲವೂ ಅಡಕವಾಗಿವೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಅರಸೀಕೆರೆ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ 1954 ನೆ ಇಸವಿಯಲ್ಲಿ 21,772 ರೂಪಾಯಿ ಉತ್ಪತ್ತಿ ಬಂದಿದೆ. 1955 ನೆ ಇಸವಿಯಲ್ಲಿ 99,817 ರೂಪಾಯಿ ಉತ್ಪತ್ತಿ ಬರುವುದಕ್ಕೆ ಕಾರಣವೇನು ?

Dr. R. NAGAN GOWDA.—Receipts for 1954 include market cess of Rs. 15,000 and licence fee of Rs. 6,000. Receipts for 1955 include Government loan of Rs. 75,000.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ರೆಗ್ಯುಲೇಟೆಡ್ ಮಾರ್ಕೆಟ್ ಆಕ್ಟ್‌ನಲ್ಲಿ ಸೇರಿರತಕ್ಕ ಕೆಲವು ಪದಾರ್ಥಗಳಲ್ಲದೆ ಇನ್ನೂ ಹೆಚ್ಚು ಪದಾರ್ಥಗಳನ್ನು ರೆಗ್ಯುಲೇಟೆಡ್ ಮಾರ್ಕೆಟ್ ಆಡಳಿತಕ್ಕೆ ಬರುವಂತೆ ಮಾಡುವುದು ಸೂಕ್ತವಲ್ಲವೆ ?

ಡಾ॥ ಆರ್. ನಾಗನಗೌಡ.—ಈಗ ಕೆಲವು ಪದಾರ್ಥಗಳನ್ನು ನಾವು ನಿರ್ಧರ ಮಾಡಿದ್ದೇವೆ. ಯಾವುದಾದರೂ ಮಾರ್ಕೆಟ್ಟಿನಲ್ಲಿ ಯಾವುದಾದರೂ ಒಂದು ಪದಾರ್ಥ ಹೆಚ್ಚಾಗಿ ವ್ಯಾಪಾರಕ್ಕೆ ಬಂದರೆ ಅದನ್ನೂ ರೆಗ್ಯುಲೇಟೆಡ್ ಮಾರ್ಕೆಟ್ ಆಕ್ಟಿನಲ್ಲಿ ತರುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ತುಮಕೂರು ರೆಗ್ಯುಲೇಟೆಡ್ ಮಾರ್ಕೆಟ್ jurisdictionಗೆ ಸಮೀಪವಾದ ಕುಣಿಗಲ್‌ನಲ್ಲಿ ಬೆಲ್ಲದ ರೆಗ್ಯುಲೇಟೆಡ್ ಮಾರ್ಕೆಟ್ ಪ್ರಾರಂಭವಾಗತಕ್ಕದ್ದು ಬಹಳ ಅವಶ್ಯಕವಲ್ಲವೆ ?

ಡಾ॥ ಆರ್. ನಾಗನಗೌಡ.—ಅದನ್ನು ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಮಾರ್ಕೆಟ್ಟುಗಳಿಂದ ಬರತಕ್ಕ ಆದಾಯವನ್ನು ಆಯಾ ಮಾರ್ಕೆಟಿಂಗ್ ಸೊಸೈಟಿಗಳು ಉಪಯೋಗಿಸಿಕೊಳ್ಳುತ್ತಿವೆ ಎಂದು ಹೇಳಿದಿರಿ. ಕೆಲವು ಬಾಬುಗಳಿಗೋಸ್ಕರ ಮಾತ್ರ ಅದನ್ನು ಉಪಯೋಗಿಸಬೇಕೆಂದು ನಮೂದು ಮಾಡಿದ್ದೀರಾ ?

Dr. R. NAGAN GOWDA.—For all purposes concerned with the administration of the Act they could use that money.

ಶ್ರೀ ಕೆ. ಲಕ್ಕಪ್ಪ.—ಸಾಮಾನ್ಯವಾಗಿ ಮಾರ್ಕೆಟ್ ಕಟ್ಟಡಗಳನ್ನು ಕಟ್ಟುವುದಕ್ಕೆ ಆ ಹಣವನ್ನು ಉಪಯೋಗಿಸಿಕೊಳ್ಳಬಹುದೇ ?

ಡಾ॥ ಆರ್. ನಾಗನಗೌಡ.—ಅವರ ಆದಾಯದಲ್ಲಿ ಕಟ್ಟಡಗಳನ್ನು ಕಟ್ಟುವುದಕ್ಕಾಗುವಷ್ಟು ದುಡ್ಡು ಏರುವುದಿಲ್ಲ. ಆದಕಾರಣ ಸರ್ಕಾರದವರು ಅವರಿಗೆ ರೋಕ್, ಸಬ್ಸಿಡಿ, ಮುಂತಾದುವುಗಳನ್ನು ಕೊಡುತ್ತಾರೆ. ಇದನ್ನು ಅವರು 10,15, 20 ವರ್ಷಗಳ ಕಂತುಗಳಲ್ಲಿ ತೀರಿಸಬಹುದು.

ಶ್ರೀ ಕೆ. ವಿ. ಬೈರೇಗೌಡ.—ಬೆಂಗಳೂರು ಸಿಟಿ ರೆಗ್ಯುಲೇಟೆಡ್ ಮಾರ್ಕೆಟ್ಟನ್ನು ಯಾಕೆ ಇದರಲ್ಲಿ ಸೇರಿಸಿಲ್ಲ ?

ಡಾ॥ ಆರ್. ನಾಗನಗೌಡ.—1954 ಮತ್ತು 1955 ಈ ಎರಡು ವರ್ಷಗಳಿಗೆ ಮಾತ್ರ ಕೇಳಿದ್ದರು. They wanted a statement of income and expenditure for 1954-55. We have no such figures for 1954-55 for Bangalore, because this market has been recently organised.

ಶ್ರೀ ಕೆ. ವಿ. ಬೈರೇಗೌಡ.—ರೆಗ್ಯುಲೇಟೆಡ್ ಮಾರ್ಕೆಟ್‌ಬೇಕೆಂದು ಎಲ್ಲೆಲ್ಲ ಒತ್ತಾಯ ಬರುತ್ತದೆಯೋ ಅಲ್ಲೆಲ್ಲ ಪ್ರಾರಂಭ ಮಾಡುತ್ತೇವೆಂದು ಹೇಳಿದಿರಿ. ರೈತರ ಮತ್ತು producers ಹಿತದೃಷ್ಟಿಯಿಂದ ಎಲ್ಲ ಮುಖ್ಯ ಮಾರ್ಕೆಟ್‌ಗಳಲ್ಲಿಯೂ ಇದನ್ನು ಜಾರಿಗೆ ತರುವುದು ಉತ್ತಮವಲ್ಲವೆ ?

ಡಾ॥ ಆರ್. ನಾಗನಗೌಡ.—ನಾವು encourage ಮಾಡುತ್ತಿದ್ದೇವೆ. ಎಲ್ಲ ಒತ್ತಾಯ ಬರುತ್ತದೆಯೋ ಅಲ್ಲ ಬೇಗ ಪ್ರಾರಂಭ ಮಾಡುವುದಕ್ಕೆ ಸಹಾಯಕವಾಗುತ್ತವೆ. The co-operation of both producers and traders will be of great use for us in running these markets. Without their co-operation it will be very difficult.

ಶ್ರೀ ಎಸ್. ಸಿದ್ದಪ್ಪ.—ರೆಗ್ಯುಲೇಟೆಡ್ ಮಾರ್ಕೆಟ್‌ಗಳಲ್ಲಿ ರಾಗಿ ಮತ್ತು ಭತ್ತದ ವಿಚಾರವಾಗಿ ಏನೂ ಪ್ರಸ್ತಾಪ ಮಾಡಿಲ್ಲ. ಅತಿ ಮುಖ್ಯವಾದ ಪದಾರ್ಥಗಳನ್ನು ಬಿಡುವುದಕ್ಕೆ ಕಾರಣವೇನು ?

ಡಾ॥ ಆರ್. ನಾಗನಗೌಡ.—ಕೆಲವು ಮಾರ್ಕೆಟ್ಟುಗಳಲ್ಲಿ ರಾಗಿ, ಜೋಳ ಮುಂತಾದುವನ್ನು ಸೇರಿಸಿದ್ದೇವೆ. ಇತರ ಪದಾರ್ಥಗಳನ್ನೂ ಸಹ ಅವಶ್ಯಕವೆಂದ್ದರೆ ಸೇರಿಸುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಸಂಸ್ಥಾನದಲ್ಲಿ ಸಾರ್ವತ್ರಿಕವಾಗಿ ರೆಗ್ಯುಲೇಟೆಡ್ ಮಾರ್ಕೆಟ್ಟುಗಳ ಸ್ಥಾಪನೆ ಅಗತ್ಯವೆನ್ನುವುದನ್ನು ಸರ್ಕಾರದವರು ಮನಗಂಡಿಲ್ಲವೆ ?

ಡಾ॥ ಆರ್. ನಾಗನಗೌಡ.—ಮಾನ್ಯ ಸದಸ್ಯರು ಎಷ್ಟು ಬೇಗನೆ ಮಾಡಬೇಕೆಂದು ಹೇಳುತ್ತಾರೆಯೋ, ಎಷ್ಟು ಬೇಗನೆ ಮಾಡಬಹುದೋ, ಅಷ್ಟೂ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಸರ್ಕಾರದವರು ಕೆಲವು ಕಡೆ ಮಾತ್ರ ರೆಗ್ಯುಲೇಟೆಡ್ ಮಾರ್ಕೆಟ್ ಮಾಡಿ ಕೆಲವು ಕಡೆ ಬಿಟ್ಟಿರೆ, ಯಾವ ದೃಷ್ಟಿಯಿಂದ ಇವುಗಳನ್ನು ಸ್ಥಾಪನೆ ಮಾಡುತ್ತಾರೆಯೋ ಆ ದೃಷ್ಟಿಕೋನಕ್ಕೆ ಸ್ವಲ್ಪ ಲೋಪ ಬರುತ್ತದೆಯಲ್ಲವೆ ?

ಡಾ॥ ಆರ್. ನಾಗನಗೌಡ.—Regulated Market Act ನಲ್ಲಿ ಏನಿದೆ ಎಂದರೆ local Municipality ಮತ್ತು local District Board ಒಪ್ಪ ಬೇಕು ಎಂದಿದೆ. ಆದಕಾರಣ ಮುಖ್ಯವಾಗಿ ರೈತರು ಕೇಳುವುದಕ್ಕೆ ಬಂದರೆ, we consult the Municipalities and District Boards. ಅವರು ಬೇಗನೆ ತಮ್ಮ ಒಪ್ಪಿಗೆ ಈಯದಿದ್ದರೆ ಸ್ವಲ್ಪ ಆಲಸ್ಯವಾಗುತ್ತದೆ.

ಶ್ರೀ ವೈ. ಯಂ. ಚಂದ್ರಶೇಖರಯ್ಯ.—ಕಡೂರು ಟೌನ್‌ನಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಆಗಬೇಕೆಂದು ಮನವಿ ಬಂದಿದೆಯೇ ?

Dr. R. NAGAN GOWDA.—I want notice for that, Sir, Probably it has come.

ಶ್ರೀ ವೈ. ಯಂ. ಚಂದ್ರಶೇಖರಯ್ಯ.—ಒಂದು ಕಡೆ ರೆಗ್ಯುಲೇಟೆಡ್ ಮಾರ್ಕೆಟ್ ಮಾಡಿ ಇನ್ನೊಂದು ಕಡೆ ಮಾಡದೆ ಇರುವುದರಿಂದ ವರ್ತಕರ ಕೈಗೆ ಸಿಕ್ಕಿ ರೈತರಿಗೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ರೆಗ್ಯುಲೇಟೆಡ್ ಮಾರ್ಕೆಟ್ ಇರುವಲ್ಲಿ ಬಿಟ್ಟು ವ್ಯಾಪಾರಸ್ಥರು ಇನ್ನೊಂದು ಕಡೆ ಹೋಗುವುದುಂಟು. ಆದರೆ ಈಗ ಎಲ್ಲ ಮಾರ್ಕೆಟ್ಟುಗಳಲ್ಲಿಯೂ ರೆಗ್ಯುಲೇಜೆಡ್ ಮಾರ್ಕೆಟ್ ಇಡಬೇಕೆಂದು ಇದ್ದೇನೆ. It is just a matter of time.

ಶ್ರೀ ಜಿ. ಬಸಪ್ಪ.—ರೈತರ ಹಿತದೃಷ್ಟಿಯಿಂದ ಮತ್ತು ರೈತರ ಕುಂದುಕೊರತೆಗಳನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಈ ಮಾರ್ಕೆಟ್ ಸಮಿತಿಗಳಲ್ಲಿ ರೈತರ ಪ್ರಾತಿನಿಧ್ಯವನ್ನು ಹೆಚ್ಚುಮಾಡಬೇಕೆಂದು ಸರ್ಕಾರದವರು ಯೋಜನೆ ಮಾಡಿದ್ದಾರೆಯೇ ?

Dr. R. NAGAN GOWDA.—Sir, at present we have given quite adequate representation for the raiyats. I think it is a bit more than the representation to other interests and parties located there.

ಶ್ರೀ ಜಿ. ಬಸಪ್ಪ.—ಕೆಲವು ಸಂದರ್ಭಗಳಲ್ಲಿ ರೈತರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Dr. R. NAGAN GOWDA.—Sir, I do not think we can change the proportion of five to eight; it is a very big proportion and we have given plenty of representation to the raiyats.

Sri V. MASIYAPPA.—Will the Government be pleased to give godown and weighing facilities in the Market Yard of Chitaldrug in order to encourage business in that town ?

Dr. R. NAGAN GOWDA.—So far as Chitaldrug Market is concerned, we have spent quite a lot of money and we have given them help even for building a house. Whatever proposal that comes from the Regulated Market will be very favourably considered.

ಶ್ರೀ ಆರ್. ಮುನಿಸ್ವಾಮಯ್ಯ.—ರೆಗ್ಯುಲೇಟೆಡ್ ಮಾರ್ಕೆಟ್ ಇರುವಕಡೆ ವ್ಯಾಪಾರಸ್ಥರು ರೈತರಿಗೆ ಬಹಳ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಕೆಲವು ಕಡೆ ಬಂದಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಅವರಿಗೆ ರಕ್ಷಣೆ ಕೊಡಲು ಏನು ಏರ್ಪಾಡು ಮಾಡಿದ್ದೀರಿ ?

ಡಾ॥ ಆರ್. ನಾಗನಗೌಡ.—ರೂಲ್ಸ್‌ಪ್ರಕಾರ ನೂಕ್ತ ಕಾರ್ಯಕ್ರಮವಿದೆ.

ಶ್ರೀ ಯು. ಎಂ. ಮಾದಪ್ಪ.—ಮೈಸೂರು ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ವೈಟ್ಸ್ ಅಂಡ್ ಮೆಷರ್ಸ್ ಆಕ್ಟ್ ಪ್ರಕಾರ ಮೆಷರ್‌ಮೆಂಟ್ ಮಾಡುತ್ತಿಲ್ಲ ಬೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Dr. R. NAGAN GOWDA.—So far as I know, Mysore market is very well administered. If there is any complaint about that, we will certainly take action.

ಶ್ರೀ ಯು. ಎಂ. ಮಾದಪ್ಪ.—ಅಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ರೆಫರ್ ಮಾಡಿದ್ದರೆ ಪುನಃ ವಿಚಾರಿಸುತ್ತೀರಾ ?

ಡಾ॥ ಆರ್. ನಾಗನಗೌಡ.—ಆಗಬಹುದು.

ಶ್ರೀ ಯು. ಎಂ. ಮಾದಪ್ಪ.—ಈ ರೆಗ್ಯುಲೇಟೆಡ್ ಮಾರ್ಕೆಟ್ ಅಳತೆ ಮತ್ತು ತೂಕದ ವಿಚಾರ ನೋಡಿಕೊಳ್ಳಲು ಒಬ್ಬರೇ ಇನ್‌ಸ್ಪೆಕ್ಟರಿರುವುದರಿಂದ ಸಿಬ್ಬಂದಿ ಸಾಕಷ್ಟಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಡಾ॥ ಆರ್. ನಾಗನಗೌಡ.—ಮತ್ತೊಬ್ಬ ಇನ್‌ಸ್ಪೆಕ್ಟರ್ ಅವಶ್ಯಕವೆಂದು ಕಂಡರೆ ಏರ್ಪಾಡು ಮಾಡುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಈಗ ಹೊಸದಾಗಿ ಪಾಸಾಗಿರುವ ವೈಟ್ಸ್ ಅಂಡ್ ಮೆಷರ್ಸ್ ಆಕ್ಟ್ ಜಾರಿಯಲ್ಲದೆಯೆ ?

Dr. R. NAGAN GOWDA.—We are framing the rules regarding that.

ಶ್ರೀ ಯು. ಎಂ. ಮಾದಪ್ಪ.—ಅದನ್ನು ಮಾಡುವುದಕ್ಕೆ ಎಷ್ಟುವರ್ಷ ಬೇಕಾಗುತ್ತದೆ ?

ಡಾ॥ ಆರ್. ನಾಗನಗೌಡ.—ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಮೈಸೂರು ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ 30 ಸಾವಿರ ರೂಪಾಯಿ ಖೋತಾ ಇರುವುದನ್ನು ಹೇಗೆ ನಿರೀಮಾಗಿಸುತ್ತೀರಿ ?

Dr. R. NAGAN GOWDA.—I think during that period there must have been some construction work and so,

they should have made up the deficit by borrowing from the Government.

ಶ್ರೀ ಜಿ. ಶಿವಪ್ಪ.—ಚಿತ್ರದುರ್ಗದಲ್ಲಿ ಕಟ್ಟಿರುವ ಒಂದು ದೊಡ್ಡ ಗೋಡೌನನ್ನು ಅಲ್ಲಿನ ರೇಗ್ಯುಲೇ ಟೆಡ್ ಮಾರ್ಕೆಟ್ಟಿಗೆ ಕೊಡುತ್ತೀವೆಂದು ಮಾನ್ಯ ಮಂತ್ರಿಗಳು ಒಂದು ಸಲಹೆ ಹೇಳಿದ್ದರು. ಅದರಂತೆ ಅದನ್ನು ಕೊಡುತ್ತೀರಾ ?

ಡಾ॥ ಆರ್. ನಾಗನಗೌಡ.—ವಿಚಾರಿಸುತ್ತೇನೆಂದು ಹೇಳಿದೆ.

Sri G. SIVAPPA—On account of the decontrol of food grains that godown is lying unused. Will the Government hand over this to the market ?

Dr. R. NAGAN GOWDA.—I will look into that question.

Drinking Water wells for Banavase village, Belagodu Hobli, Sakalespur Taluk.

Q.—67. Sri H. K. SIDDAIYA (Belur—Scheduled Castes).—

Will the Government be pleased to state :—

(*a*) the number of applications that have been received for public drinking water wells from the residents of Banavase village, Belagodu Hobli, Saklespur Taluk ;

(*b*) whether they will provide wells as early as possible in view of the fact that inconvenience is being felt due to water scarcity during summer by this thickly populated area ?

A.—Sri T. CHANNIAH (Minister for Public Health and Local Self-Government).—

(*a*) Four.

(*b*) One well has been sanctioned to Ballupet village which is contiguous to Banavase village.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಬಾವಿ ಮಂಜೂರಾಗಿ ಎಷ್ಟು ದಿವಸವಾಯಿತು ?

ಶ್ರೀ ಟಿ. ಚನ್ನಯ್ಯ.—ಯಾವ ತಾರೀಖಿನಲ್ಲಿ ಮಂಜೂರಾಯಿತೆಂಬುದು ಜ್ಞಾಪಕವಿಲ್ಲ, ವಿವರ ಬೇಕಾದರೆ ತಿಳಿದು ಆಮೇಲೆ ಹೇಳುತ್ತೇನೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಬಾವಿಗಳನ್ನು ಮಂಜೂರು ಮಾಡುವಾಗ ಸರ್ಕಾರ ಅನುಸರಿಸುವ ನೀತಿಯೇನು ?

ಶ್ರೀ ಟಿ. ಚನ್ನಯ್ಯ.—ಎಲ್ಲಿ ಕುಡಿಯುವ ನೀರಿನ ಬಾವಿಯಿಲ್ಲವೋ ಅಲ್ಲಿಗೆ ಕೊಡಬೇಕೆಂಬುದು.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಬಾವಿಗೆ ಪಂಚಾಯಿತಿಯಿಂದ ಏನಾದರೂ ಹಣಕೊಡಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಎಚ್. ಕೆ. ಸಿದ್ದಯ್ಯ.—ಅಮಲ್ದಾರರು ಪಂಚಾಯಿತಿಯಿಂದ ಕಾಲುಭಾಗ ಹಣಕೊಡಬೇಕೆಂದು ಕೇಳಿದರು. ಸರ್ಕಾರದವರು ಪಂಚಾಯಿತಿ ಹಣ ಕೇಳದೆ ತಾವೇ ಬಾವಿ ತೆಗೆಸಲು ಏರ್ಪಾಡುಮಾಡುತ್ತಾರೆಯೇ ?

ಶ್ರೀ ಟಿ. ಚನ್ನಯ್ಯ.—ಈಗಾಗಲೆ 1,750 ರೂಪಾಯಿಗಳನ್ನು ಕೊಟ್ಟಿದೆ. ಬಲ್ಲುಪೇಟೆಯಲ್ಲಿ ಬಾವಿ ತೆಗೆಸುವುದರ ಜೊತೆಗೆ ಬನವಾಸಿಯಲ್ಲೂ ತೆಗೆಸುವುದು ಅವಶ್ಯಕವೆಂದರೆ ತೆಗೆಸೋಣ.

ಶ್ರೀ ಎಚ್. ಕೆ. ಸಿದ್ದಯ್ಯ.—ಈಗ ಮಂಜೂರಾಗಿರುವ ಬಾವಿ ತೆಗೆದಿಲ್ಲ, ಪಂಚಾಯಿತಿಯಿಂದ 400 ರೂಪಾಯಿ ಕೊಡಬೇಕೆಂದು ಅಮಲ್ದಾರರು ಕೇಳುತ್ತಿದ್ದಾರೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ತಾವು ಲೋಕಲ್ ಡೆವಲಪ್‌ಮೆಂಟ್ ಸ್ಕೀಂನಲ್ಲಿ ಮಂಜೂರಾಗಿರುವ ಹಣದ ವಿಚಾರ ಹೇಳುತ್ತಿರುವಂತೆ ಕಾಣುತ್ತದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಬೇಲೂರು, ಆಲೂರು, ಸಕಲೇಶಪುರ ಮುಂತಾದ ಗ್ರಾಮಗಳ ಒಂದು ಸಾವಿರ ಜನರಿಗೆ ನಾನು ಪ್ರಶ್ನೆಯಲ್ಲಿ ಕೇಳಿರುವ ಬಾವಿಯ ಆವಶ್ಯಕತೆ ಬಹಳವಾಗಿರುವುದರಿಂದ ಅದಕ್ಕೆ ಪೂರ್ತಿಯಾಗಿ ಸರ್ಕಾರದಿಂದ ಗ್ರಾಂಟನ್ನು ಕೊಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅದನ್ನು ಆಲೋಚನೆಮಾಡಿ ನೋಡುತ್ತೇವೆ.

Wells (Government) in Huliyurdurga villages

Q.—432. Sri N. HUCHMASTHY GOWDA (Huliyurdurga).—

Will the Government be pleased to state :—

(*a*) the number of villages where there are Government wells in Huliyurdurga ;

(*b*) the number of villages having only private wells ;

(*c*) the number of villages which have no wells at all (including *Dakhle* villages) ?

A.—Sri T. CHANNIAH (Minister for Public Health and Local Self-Government).—

(*a*) 28.

(*b*) 9.

(*c*) 25.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕುಡಿಯುವ ನೀರಿನ ಬಾವಿಗಳಿಲ್ಲದೆ ತೊಂದರೆಯಾಗಿ ಐದಾರು ವರ್ಷಗಳಿಂದ ಅನೇಕ ಕಡೆಗಳವರು ಕೇಳುತ್ತಿಲ್ಲವೆ ?